# ಗಿರಣಿ

-ಶಿಶುನಾಳ ಶರೀಫರು

'ಗಿರಣಿ' ಎಂದ ಕೂಡಲೆ ಅಥವಾ ಗಿರಣಿ ಎಂಬ ಪದವನ್ನು ಕೇಳಿದ ತಕ್ಷಣ ನಮ್ಮ ನೆನಪಿಗೆ ಬರುವುದು "ಅಕ್ಕಿ ಗಿರಣಿ, ಸೇಂಬಿನ ಗಿರಣಿ, ಹತ್ತಿ ಗಿರಣಿಗಳು";ಇವು ಸಿದ್ಧ ಉಡುಪು ಮತ್ತು ವಸ್ತ್ರ ತಯಾರಿಸುವ ಗಿರಣಿಗಳು. ದಕ್ಷಿಣ ಕರ್ನಾಟಕದ ಅಕ್ಕಿ ಗಿರಣಿಯಂತೆ, ಉತ್ತರ ಕರ್ನಾಟಕದಲ್ಲಿ ಹತ್ತಿ ಗಿರಣಿ ಅತ್ಯಂತ ಪ್ರಸಿದ್ಧವಾದವು. ಗಿರಣಿಗಳ ಬಗ್ಗೆ ನಮ್ಮ ಕನ್ನಡ ಸಾಹಿತ್ಯದಲ್ಲಿ ಹೆಸರಾಂತ ತತ್ವಜ್ಞಾನಿ, ಆತ್ಮಜ್ಞಾನಿ, ಆಧ್ಯಾತ್ಮ ಚಿಂತಕರಾದ ಶಿಶುನಾಳ ಶರೀಫರು ತಮ್ಮ ತತ್ತ್ವಗೀತೆಗಳ ಮೂಲಕ ಗಿರಣಿಯ ವೈಶಿಷ್ಟ್ಯತೆ, ಇಲ್ಲಿ ಗಿರಣಿಯ ಕಾರ್ಯ, ಹಾಗೂ ಆಧುನಿಕತೆಯನ್ನ ಚಿತ್ರಿಸಿದ್ದಾರೆ. ವಸ್ತುವಿನ ಬಗ್ಗೆ ಇದ್ದ ನಮ್ಮ ಜನರ ಅಭಿಪ್ರಾಯ, ಮನಸ್ಸಿನ ತುಮುಲಗಳು "ಗಿರಣಿಯ ವಿಸ್ತಾರ ನೋಡಮ್ಮಾ" ಎಂಬ ತಾತ್ವಿಕ ಚಿಂತನೆಯಲ್ಲಿದೆ.

ಶಿಶುನಾಳ ಶರೀಫರ ಗೀತೆಗಳಲ್ಲಿ ತಾತ್ವಿಕ ಚಿಂತನೆ, ಆಧ್ಯಾತ್ಮಿಕ ಚಿಂತನೆಗಳು ಮಾತ್ರವಲ್ಲದೆ ಇತಿಹಾಸ, ಜನರ ಆರ್ಥಿಕ ಬದುಕು, ರಾಜಕೀಯತೆ ಮುಂತಾದ ಅಂಶಗಳನ್ನು ತಿಳಿಯಬಹುದು. ನಮ್ಮ ಭಾರತ ದೇಶಕ್ಕೆ ಗಿರಣಿಯ ಸ್ಥಾಪನೆ ಬ್ರಿಟಿಷರ ಆಳ್ವಿಕೆಯಲ್ಲಿ ಆರಂಭವಾಯಿತು ಎನ್ನಬಹುದು. ಅದರಂತೆ ಶಿಶುನಾಳ ಶರೀಫರ ಗಿರಣಿ ಎಂಬ ಈ ಕಾವ್ಯದಲ್ಲಿ

"ಧರಣೀ ಪತಿಯು ರಾಣಿ

ಕರನಾಟ ರಾಜ್ಯಕ್ಕೆ

ತರಿಸಿದ ಘನ ಚೋದ್ಯವೋ ಚೀನಾ ದೇಶದ ವಿದ್ಯೆಯೋ"

ಎಂಬ ಸಾಲುಗಳು ನಮ್ಮ ರಾಜ್ಯಕ್ಕೆ ಬ್ರಿಟೀಷರಿಂದ ಗಿರಣಿಯ ಸ್ಥಾಪನೆ ಹಾಗೂ ಕಾರ್ಯ ಆರಂಭವಾಯಿತು. ಹಾಗೆಯೇ ೧೮೮೦ರ ದಶಕದಲ್ಲಿ ಗುಂಬಾಯಿಯ ಫೇಬರ ಕಂಪನಿಯವರು ಗೋಕಾಕದಲ್ಲಿ ಮತ್ತು ಹುಬ್ಬಳ್ಳಿಯಲ್ಲಿ ಹತ್ತಿ ಗಿರಣಿಯನ್ನು ಸ್ಥಾಪಿಸಿದರು ಹಾಗೂ ೧೮೮೮ರಲ್ಲಿ ಧಾರವಾಡ ಜಿಲ್ಲೆಯಲ್ಲಿ ರೈಲು ಸಂಪರ್ಕವೂ ಕೂಡ ಸ್ಥಾಪಿತವಾಯಿತು ಎಂಬ ಅಂಶವನ್ನು 'ಚೀನಾದೇಶದ ವಿದ್ಯೆಯೋ' ಎಂಬ ಶರೀಫರ ಮಾತಿನ್ನು ಈ ಗೀತೆಯ ಮೂಲಕ ತಿಳಿಯಬಹುದು. ಅಂದರೆ ಚೀನಾದೇಶವು ಆಧುನಿಕ ಯಂತ್ರಗಳ ಬಳಕೆಯಲ್ಲಿ ನಮ್ಮ ದೇಶಕ್ಕಿಂತಲೂ ಮುಂದುವರಿದಿತ್ತು ಎಂಬುದು ತಿಳಿದುಬರುತ್ತದೆ. ನಮ್ಮ ನಾಡಿನ ಜನರು ಈ ಆಧುನಿಕ ಯಂತ್ರಗಳ ಕಾರ್ಯತಂತ್ರವನ್ನು ಗಮನಿಸಲು ಗುಂಪು ಗುಂಪಾಗಿ ಬರುತ್ತಿದ್ದನ್ನು ಕಂಡ ಶರೀಫರು, ಮಾನವನ ವಿದ್ಯೆ, ಬುದ್ಧಿ, ಚಾಣಾಕ್ಷ್ಯ ಫಲದಿಂದ ಆಧುನಿಕತೆ ಹುಟ್ಟಿ ಬೆಳೆದು ಆಧ್ಯಾತ್ಮಿಕತೆಯನ್ನು ಮರೆತು ಜೀವನ ನಡೆಸುತ್ತಿರುವ ಜನರಿಗೆ ತಮ್ಮ ಗೀತೆಗಳ ಮೂಲಕ ಆತ್ಮಾವಲೋಕನವನ್ನು ತಿಳಿಸುವ ಕಾರ್ಯವನ್ನು ಮಾಡಿದ್ದಾರೆ.

"ಬದುಕಿನ ವಿಸ್ಮಯದೊಳಗೆ ಮಾನವನು ನಿಸರ್ಗ ರೂಪಿಸಿರುವ ಒಂದು ಯಂತ್ರದಂತೆ"

ಎಂಬ ಮಾತಿಗೆ ಶರೀಫರು ಒಂದು ಯಂತ್ರವು ಕಾರ್ಯ ನಿರ್ವಹಿಸಬೇಕಾದರೆ ಅದಕ್ಕೆ ಮುಖ್ಯವಾಗಿ ನೀರು, ಬೆಂಕಿ, ಗಾಳಿ ಅನಿವಾರ್ಯವಾಗಿವೆ ಹಾಗೆಯೆ ಮಾನವನ ದೇಹವು ಸಹ ಚಲನೆ ಹೊಂದಬೇಕಾದರೆ ನೀರು, ಗಾಳಿ, ಬೆಂಕಿ [ಬೆಳಕು] ಅತ್ಯವಶ್ಯಕವಾಗಿವೆ ಮತ್ತು ಅವುಗಳಿಂದ ರೂಪಿತವಾಗಿದೆ ಎಂಬುದನ್ನು ತಿಳಿಸಿದ್ದಾರೆ. ನೀರು, ಬೆಂಕಿ, ಗಾಳಿ [ವಾಯು] ಗಳಿಂದ ಒಂದಾಗಿ ಬೆರೆತು ಭೂಮಿಯಿಂದ ಆಕಾಶದವರೆಗೆ ಮಾನವನ ದೇಹವು ಚೆಲುವಾಗಿ ಬೆಳೆದು ನಿಂತಿದೆ. ಇದನ್ನು ಕಾರ್ಖಾನೆಯ ಹೊಗೆಯ ಕಂಬಕ್ಕೆ ಹೋಲಿಕೆ ಮಾಡಿದ್ದಾರೆ.

ಮಾನವನ ದೇಹದೊಳಗೆ ಆತ್ಮ ಎಂಬ ಒಂದು ಆಕಾರವಿದೆ, ಅದು ನಿರಾಕಾರವಾಗಿದ್ದರು ಸಹ ಅದರ ಕಾರ್ಯ ಬಹಳ ವಿಶಿಷ್ಟವಾದುದು. ಅಂದರೆ ಒಂಬತ್ತು ರಂಧ್ರಗಳಿಂದ ರೂಪಿತವಾಗಿರುವ ನಮ್ಮ ದೇಹದ ಹಿಡಿತವನ್ನು ನಮ್ಮ ಆತ್ಮ ನಿಯಂತ್ರಿಸುತ್ತದೆ ಎಂಬುದನ್ನು ಶರೀಫರ "ಒಳಗೊಂದು ಬೇರೆ ಆಕಾರ ತಿಳಕೊ ಅದರ ಚಮತ್ಕಾರ" ಎಂಬ ಕಾವ್ಯದ ಸಾಲುಗಳಿಂದ ತಿಳಿದುಕ್ಕೊಳ್ಳಬಹುದು.

ಗಿರಣಿಯಲ್ಲಿ ಬಟ್ಟೆಯನ್ನು ತಯಾರಿಸುವ ವಿಧಾನವನ್ನು ಒಂದು ಚಮತ್ಕಾರವೆಂದು ಹೇಳಿದ ಶರೀಫರು ಅರಳಿ ಕಾಯಿಯಿಂದ ನೂಲನ್ನು ತೆಗೆಯಲು ಎರಡು ಗಾಲಿಗಳು ಇರುವಂತೆ ಮಾನವ ಗುಣಗಳಲ್ಲಿ ನಿಸ್ವಾರ್ಥವನ್ನು ತುಂಬಿ ಆತನನ್ನು ಪರಿಶುದ್ಧವಾದ ಬಿಳಿಯ ಬಟ್ಟೆಯಂತೆ ಪರಿಶುದ್ಧ ಮಾಡಲು ನಿರ್ಗುಣಾಕಾರನಂತೆ ಇರುವ ಬ್ರಹ್ಮನು ಇರಬೇಕು. ಅಂದರೆ ಮಾನವನನ್ನು ಲೌಕಿಕ ಜಗತ್ತಿನಿಂದ ಮುಕ್ತಿದಾಯಕದ ಕಡೆಗೆ ಒಯ್ಯಲು ನಮ್ಮ ಆತ್ಮವು ನಿರ್ಗುಣ ಸ್ವಭಾವದಿಂದ ಕೂಡಿರಬೇಕು ಎಂಬುದನ್ನು ಶರೀಫರ ಗೀತೆಗಳ ಮೂಲಕ ತಿಳಿದುಕೊಳ್ಳಬಹುದು.

ಹೀಗೆ ಗಿರಣಿಯಿಂದ ತಯಾರಾದ ಪರಿಶುದ್ಧವಾದ ಬಟ್ಟೆಗಳು ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಇಟ್ಟಾಗ ಅವುಗಳ ಮಹತ್ವ ಹೆಚ್ಚಾಗುವಂತೆ, ನಿಸ್ವಾರ್ಥ ಮನೋಭಾವ, ಸುಗುಣಗಳ ತುಂಬಿದ ಮನಸ್ಸು, ಆತ್ಮಾಭಿಮಾನ ಇರುವ ಮನುಷ್ಯನು ತನ್ನ ತನು ಮನಗಳನ್ನು ಶಿಶುನಾಳ ದೇವನಿಗೆ ಅರ್ಪಿಸಿದಂತೆ. ಅಂದರೆ ಋಷಿಮುನಿಗಳು ತೊಡುವ ಕಾವಿ ಬಟ್ಟೆಯಂತೆ ಮಾನವನ ದೇಹವು ಶಿಶುನಾಳಾಧೀಶನಿಗೆ ತೊಡಿಸಿದ ಪರಿಶುದ್ಧವಾದ ಬಟ್ಟೆಯಂತೆ ಪ್ರತಿಯೊಬ್ಬರು ಇರುವುದು ಈ ಜಗತ್ತಿನಲ್ಲಿ, ಇದರಿಂದ ಇಡೀ ಮನುಕುಲವೆ ಪರಮಾನಂದವನ್ನು ಪಡೆಯುವುದು ಎನ್ನುವ ಅರ್ಥವನ್ನು ಈ ಕಾವ್ಯ ಕಟ್ಟಿಕೊಡುತ್ತದೆ.

ಹೀಗೆ ಗಿರಣಿ ಕಾವ್ಯದಲ್ಲಿ ಶಿಶುನಾಳ ಶರೀಫರು ಒಂದು ಗಿರಣಿಯ ಕಾರ್ಯ, ರಚನೆ, ಮತ್ತು ವೈಶಿಷ್ಟ್ಯ ಹೇಳುವ ಪರಿಕ್ರಿಯೆಯಲ್ಲಿ ಮಾನವನ ರಚನೆ, ಆತ್ಮ ಪರಿಕಲ್ಪನೆ, ಪರಮಾನಂದವನ್ನು ಪಡೆಯುವ ಬಗೆ ಹಾಗೂ ಆಧ್ಯಾತ್ಮ ಕ್ರಿಯೆಯನ್ನು ತಿಳಿಸಿಕೊಡಲು, ಜಗತ್ತಿಗೆ ಅದರ ಬಗ್ಗೆ ಅರಿವನ್ನು ಮೂಡಿಸುವ ಕಾರ್ಯವನ್ನು ಮಾಡಿದ್ದಾರೆ ಎನ್ನುವ ಅಂಶಗಳನ್ನು ಗಮನಿಸಬಹುದು.

ಒಟ್ಟಿನಲ್ಲಿ ಶಿಶುನಾಳ ಶರೀಫರ ಗೀತೆಗಳನ್ನು ಗಮನಿಸಿದಾಗ ಪ್ರಪಂಚದಲ್ಲಿ ಅಲ್ಪವೆನ್ನಬಹುದಾದ ವಸ್ತುಗಳ ಮೂಲಕ ಸಾಮಾನ್ಯ ಸಂಗತಿಗಳನ್ನು, ಬದುಕಿನಲ್ಲಿ ಅಶಾಶ್ವತವಾದ ಪ್ರಸಂಗಗಳನ್ನು, ಮಾನವನ ಜೀವನ ಮೌಲ್ಯಗಳನ್ನು, ಆಧ್ಯಾತ್ಮಿಕ ಮಹತ್ವವನ್ನು, ಪರಮಾನಂದವನ್ನು ಪಡೆಯುವ ಬಗೆಯನ್ನು ಬಹಳ ಸರಳವಾಗಿ ತಮ್ಮ ಗೀತೆಗಳಲ್ಲಿ ತಿಳಿಸಿಕೊಟ್ಟಿದ್ದಾರೆ ಎಂಬ ಅಂಶಗಳನ್ನು ನಾವು ಅವಲೋಕಿಸಬಹುದು.

ಶ್ರೀ ... - I M.A - II Sem - C3. ಪ್ರಾಯೋಗಿಕ ವಿಮರ್ಶೆ - ... Topic ①

1 ಈ ಕೆಳಗಿನ ಪದ್ಯವನ್ನು ವಸ್ತು, ಭಾಷೆ ಹಾಗೂ ಛಂದಸ್ಸಿನ ದೃಷ್ಟಿಯಿಂದ ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿ. → [ಅಭಿಜಿತ್]

ಮೃಗಯಾವ್ಯಾಜದಿ ನೋಡುವ ಶಂಕರನು ಕೊಳ್ವುದುಂ ಪೆರ್ಬಲ್ಲೆತ್ತೆ
ನ್ಮೃಗಶಾಬಾಕ್ಷಿಯ ಕಂಪು ಕಟ್ಟಿ ಮಧುಪಂಗಳೊಳ್ ಸೋಲ್ತು ಕಂಡೊಲ್ವುದು ನ
ಲ್ಲೆಗೆ ಅಭ್ಯಂಗವಿಮಂಕೆಯ್ಯೊಳ್ ಪಿಡಿದು ನೀಂ ಬಾ ಪ್ರೇಮದೊಳೆಂದೊಡೆ
ಲ್ಲಗೆ ತಕ್ಕೆಸೆ ನಾಣ್ಚಿ ಬೇಡುವುದೆ ನೀಂ ವೇಷ್ಟಯನಂ ಬೇಡಿರೇ

2 ಈ ಕೆಳಗಿನ ವಚನಗಳನ್ನು ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿ.

ಗಂಡ ಶಿವಲಿಂಗದೇವರ ಭಕ್ತ;
ಹೆಂಡತಿ ಮಾರಿ ಮಸಣಿಯ ಭಕ್ತೆ!
ಗಂಡ ಕೊಂಬುದು ಪಾದೋದಕ-ಪ್ರಸಾದ;
ಹೆಂಡತಿ ಕೊಂಬುದು ಸುರೆ-ಮಾಂಸ!
ಭಾಂಡ-ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ
ಕೂಡಲಸಂಗಮದೇವಾ

ಸಂಗದಿಂದಲ್ಲದೆ ಕಿಚ್ಚು ಹುಟ್ಟದು;
ಸಂಗದಿಂದಲ್ಲದೆ ಬೀಜ ಮೊಳೆದೋರದು;
ಸಂಗದಿಂದಲ್ಲದೆ ದೇಹವಾಗದು;
ಸಂಗದಿಂದಲ್ಲದೆ ಸರ್ವಸುಖದೋರದು;

3 ಪೌರ್ವಾತ್ಯ - ಪಾಶ್ಚಾತ್ಯದಲ್ಲಿ ಪ್ರಾಯೋಗಿಕ ವಿಮರ್ಶೆ ಬೆಳೆದು ಬಂದ ಬಗೆ.

4 ಈ ಕೆಳಗಿನ ಪದ್ಯವನ್ನು 'ಬಿಂಬ'ದ ಹಿನ್ನೆಲೆಯಲ್ಲಿ ಪ್ರಾಯೋಗಿಕ ವಿಮರ್ಶೆಗೆ ಒಳಪಡಿಸಿ.

I
ನೀ ನುಡಿಯದಿರಲೇನು, ಬಯಲಾಗಿಹುದು ಎಲ್ಲ
ಕಣ್ಣಂಚಿನ ಹೊನಲ ಭಾವದಲ್ಲಿ;
ಬಗೆ ನೋಟ ಭಾರಕ್ಕೆ ಬಳಲಿರುವ ಮೊಗವಿಹುದು
ಶಾಂತಿಯಿರದಾಸದ ರೀತಿಯಲ್ಲಿ.

II
ಬಾಡಿರುವ ಮೊಗದಲ್ಲಿ ಕೆಳಬಿರಿದ ಕಣ್ಣಲ್ಲಿ
ನಿನ್ನ ನಿರ್ಮಲ ಚಿತ್ತ ಕಾಣುವಾಗ.
ಸೊಗವಿರದ ತುಟಿಯಲ್ಲಿ ಸುಳಿದಿರುವ ನಗೆಯಲ್ಲಿ
ಚೆಲುವನಾಸೆಯ ... ಹುಡುಕುವಾಗ.

iii) "ನಿನ್ನ ನಗೆ ಮಲ್ಲಿಗೆಯು ನಕ್ಕಿಲ್ಲದ ರನ್ನದಲ್ಲಿ
ಬೆಳ್ಳಿಸುತಿನ ಎಂದೆಂದು" ಎಂದ ನೀನುಡಿ
ಇಂದೇಕೆ ಈ ವಿರಸ, ವಿರಾಮ್ಯ ಬಿಕ್ಕು-
ನಂಬದೆಲೆ ಕಂಡಿಸಿದೆ ಹೃದಯ ನೀನು.
ನೀನು ಬಿಡುವುದಕ್ಕೆ....

ಮಾಲಿಕಂಠ

ವಿರಹ ವೇದನೆ

5. ಈ ಪದ್ಯದ ಭಾವವನ್ನು ತ್ರಿವಳಿಗಳ ಚುಟುಕಿನಲ್ಲಿ ಬರೆಯಿರಿ.

ಕಿತ್ತುಕೊಳ್ಳಲು ನಿನ್ನ ನೀಂ; ಜಗವು ಕಿತ್ತುಬರಲಿ!
ಕಿತ್ತುಕೊಳ್ಳಲಾಗದು ಬಲಿಯುಂಟು ಮರೆಯದಿರು॥
ಬಿದ್ದ ನೀಂ ಬೆಳಗನಿತು ಬೆಳಗಿಯೆ ಸಾಗುವುದೆ!
ಸ್ಪರ್ಧೆಯ ಪ್ರೀತಿಸುವಗೆ - ಮಂಕುತಿಮ್ಮ॥

ಮಾನಸಿ

ಎಲ್ಲಿದ್ದರೋ ಇವರು ಎಲ್ಲಿಂದ ಬಂದರೋ ಇವರು
ಎಚ್ಚೆತ್ತ ಸಿಂಹಗಳು ನನ್ನ ಜನರು
ಎಷ್ಟು ಅಲೆದಾಡಿದ ಕನಸು ಕಾಣುತ್ತಿದ್ದರೋ ಇವರು
ಎದ್ದು ಬರುಗಾಳಿಗಳು ನನ್ನ ಜನರು
ಕೊಟ್ಟಿದ್ದರು ಕಲ್ಲ ಕಿತ್ತ
ಎಷ್ಟಿಗೆ ಹೂವ ಮುಡಿಸುವೆ
ಬಂದಾಗಲೂ ನಿನ್ನ ಎದೆಗೆ
ನನ್ನ ಎದೆಯ ಬಿಸ್ತಿವೆ.

6. ತ್ರಿವಳಿಗಳ ಚುಟುಕಿನ 4 ಬಗೆಯ ಲಕ್ಷಣಗಳು ಹಾಗೂ 10 ತ್ರಿವಳಿಗಳನ್ನು ಬರೆಯಿರಿ:

ರಮ್ಯ

7. ಈ ಕಾದಂಬರಿಯ ಗದ್ಯಭಾಗವನ್ನು ವಸ್ತು, ಭಾಷೆಯ ದೃಷ್ಟಿಯಿಂದ ವಿಶ್ಲೇಷಿ.

"ನಿನ್ನದು ಬಿಡಾದು ಬ್ಯಾರೆ ಇಬ್ಬರ ಸಂಸಾರ. ಬದನ್ನ ತಂದೋರಿಗೆ ನಮ್ಮೂರು ಮನಸ್ಸಾದ್ಲ್ಲ ಹೇಗಾ ಹೂತ್ತಾಳಕ್ಕೆ ಜಾಗ ಕೊಡಾಕಿಲ್ಲ. ಮನೀದೀಬಿಳಿಂದು ಪೆಟ್ಟ ಇರತ್ತೆ. ಹೇಗಾ ತೊಗೊಂಡೋಗೋದಕ್ಕೆ ಬಿದ್ನ ಕೊಡೊಲ್ಲ. ಭಾಳ ತಕರಾರು ಮಾಡ್ತಾರೆ.

"ಬಿದ್ದ ಯಾಕೆ ನಿಮ್ಮೂರಲಿ ತೆನ್ನುಲ್ಲ" ಎಂದೆ. "ಅವು ನಲ ಕೈಲ ಬಸ್ಸಿಲ್ನ ಮಾಡಿಸ್ಕೊಳ್ಳುವಾರೆ. ಎಂಕ್ಟೇಶ್ವರವೆಲ್ಲ ಮಾಡಿಕೊಂಡವರೆ. ಅದ್ಕೇ ತನ್ನಕೊಂತ್ರಾ ಕಷ್ಟ ಮಾಡವರೆ. ಇಂಥಾರನ್ನೆಲ್ಲ ದೊಡ್ಡ ಯಾಕೆ ತನ್ನಕೇ ಕೊಡ್ತಿಲ್ವೆ ಮಾಡಿದರೆ. ಹೇಗೆ ಸಾಯುತ್ತೆ" ಎಂದ.

ಕಲ್ಲನಲ್ಲ - ನಿರ್ಲಜ್ಜ

ರಾಜೇಶ್

[illegible signature]